# ಅರಳೆಯಲ್ಲಿ ಅರಳಿದ ಗಣಪತಿ



ತೀರ್ಥಹಳ್ಳಿಯ ಎಂಬತ್ತರ ವಯೋವೃದ್ಧೆ ಲಲಿತಮ್ಮ ಮಂಜುನಾಥ ಅವರು ಹತ್ತಿಯಿಂದ ಮಾಡಿರುವ ಗಣಪತಿ ವಿಗ್ರಹಗಳನ್ನು ನಿಜಕ್ಕೂ ಪರಿಸರ ಸ್ನೇಹಿ ಎಂದು ಹೇಳಬಹುದು. ನೋಡಲು ತುಂಬಾ ಆಕರ್ಷಣೀಯವಾಗಿರುವ ಈ ವಿಗ್ರಹಗಳನ್ನು ಪೂಜಿಸಿ, ವಿಸರ್ಜಿಸಿ ನಂತರ ಮನೆಯಲ್ಲಿಯೇ ಇರಿಸಿಕೊಳ್ಳಲೂಬಹುದು.

ಮೊದಲಿನಿಂದಲೂ ಹಲವು ಕುಶಲ ಕಲೆಗಳಲ್ಲಿ ಪರಿಣಿತಿ ಹೊಂದಿರುವ ಲಲಿತಮ್ಮನವರಿಗೆ ಇತ್ತೀಚೆಗೆ ತಮ್ಮ ಪತಿಯ ಅಗಲಿಕೆಯಿಂದಾಗಿ ಉಂಟಾದ ದುಃಖವನ್ನು ಮತ್ತು ಒಂಟಿತನವನ್ನು ಮರೆಯಲು ಅವರ ಮಗಳು ಒಂದಿಷ್ಟು ಹತ್ತಿ ಮತ್ತು ಸಂತದ ತಗಡುಗಳನ್ನು ತಂದುಕೊಟ್ಟು ಏನಾದರೂ ಮಾಡುತ್ತಿರು ಎಂದು ಪ್ರೇರೇಪಿಸಿದರಂತೆ. ಆಗ ಅವರ ಕಲ್ಪನೆಯಂತೆ ಬಾಲಗಣಪತಿ, ಕಮಲದ ಮೇಲೆ ಕುಳಿತ ಗಣಪತಿ, ಇಲಿಯನೇರಿದ ಲೋಕ ಸಂಚಾರಿ.. ಹೀಗೆ ಹಲವು ರೀತಿಯ ಗಣಪತಿಯ ಕಲಾಕೃತಿಗಳು ಅರಳಿದವು. ಜೊತೆಗೆ ಗಣಪನ ನೈವೇದ್ಯದ ಖಾದ್ಯಗಳಾದ ಒಡೆದ ತೆಂಗಿನಕಾಯಿ, ಕತ್ತರಿಸಿದ ಕೊಬ್ಬರಿ, ಕಡಬು, ಉಂಡೆ, ಹಣ್ಣುಗಳು ಎಲ್ಲವನ್ನೂ ಅಚ್ಚುಕಟ್ಟಾಗಿ ಅಲಂಕಾರಕ್ಕಾಗಿ ಮಾಡಿರಿಸಿದ್ದಾರೆ. ಈ ಎಲ್ಲಾ ಕಲೆಗೆ ಅವರು ಕೊಂಡು ತಂದದ್ದು ಕೇವಲ ಹತ್ತಿ, ಸಂತದ ತಗಡು ಮತ್ತು ಕೆಲವು ನೈಸರ್ಗಿಕ ಬಣ್ಣಗಳನ್ನು ಮಾತ್ರ. ಅಲ್ಲದೇ ಮನೆಯಲ್ಲಿದ್ದ ಹಳೆಯ ಮುಚ್ಚಳ, ತಟ್ಟೆ ಮುಂತಾದವನ್ನು ಸಹ ಉಪಯೋಗಿಸಿದ್ದಾರೆ.

**-ವಸಂತಿ ಮಂಜುನಾಥ್, ತೀರ್ಥಹಳ್ಳಿ**



# ಮದ್ಯದ ಬಾಟಲಿ ಸಂಗ್ರಹ

ಶಿವಮೊಗ್ಗದ ನಿವೃತ್ತ ಬ್ಯಾಂಕ್ ಅಧಿಕಾರಿ ಮುಕುಂದ್ ಪೈ ಅವರಿಗೆ ಮದ್ಯದ ಬಾಟಲಿ ಸಂಗ್ರಹಿಸುವ ಹವ್ಯಾಸ. ಹೆಸರಾಂತ ಮನಃಶ್ಯಾಸ್ತ್ರಜ್ಞ ದಿ. ಡಾ.ಅಶೋಕ್ ಪೈ ಅವರ ಹಿರಿಯ ಸಹೋದರರಾಗಿರುವ ಇವರು ಶಿವಮೊಗ್ಗದ ಮಾನಸ ನರ್ಸಿಂಗ್ ಹೋಮ್‌ನಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮೊದಲು ಮೊಲ, ಅಳಿಲು, ನಾಯಿ, ಗಿಳಿ, ಕೊನೆಗೆ ಜಿಂಕೆ ಸಾಕಿದ್ದರಲ್ಲದೇ ಅಂಚೆ ಚೀಟಿಗಳು ಹಾಗೂ ನಾಣ್ಯಗಳ ಸಂಗ್ರಹವೂ ಇವರ ಪ್ರೀತಿಯ ಹವ್ಯಾಸವೇ ಆಗಿತ್ತು.

1985ರಲ್ಲಿ ಪ್ರಾರಂಭವಾದ ಮದ್ಯದ ಬಾಟಲಿಗಳ ಸಂಗ್ರಹ ಇದೀಗ 1400 ಬಾಟಲಿಗಳಿಗೆ ಮುಟ್ಟಿದೆ. ಇದರಲ್ಲಿ ದಾಖಲೆಯೆನ್ನುವಂತೆ ನಾನಾ ವಿಧದ 150 ವಿಸ್ಕಿ ಬಾಟಲಿಗಳೇ ಇವೆ. ಮದ್ಯ ಸೇವನೆ ಮಾಡಬೇಕೆನಿಸದಿದ್ದರೂ ಮುಕುಂದ್ ಪೈಯವರಿಗೆ ಸದಾ ಮದ್ಯದ ಬಾಟಲಿಯ ಮೇಲೇ ಕಣ್ಣು! ವಿಶಿಷ್ಟವಾದ ಬಾಟಲಿಯೊಂದು ಕಣ್ಣಿಗೆ ಕಂಡರೆ ಸಾಕು, ಹೇಗಾದರೂ ಮಾಡಿ ಅದನ್ನು ಪಡೆದುಕೊಳ್ಳುವ ತನಕ ಸಮಾಧಾನವಿಲ್ಲ.

ಪೈ ಅವರು ಮನೆಗೆ ಬಂದ ಅತಿಥಿಗಳಿಗೆ ಓರಣವಾಗಿ ಜೋಡಿಸಿಟ್ಟ ವಿವಿಧ ಬ್ರ್ಯಾಂಡ್‌ಗಳ, ದೇಶ–ವಿದೇಶಗಳ, ವಿವಿಧ ಗಾತ್ರಗಳ ಬಾಟಲಿಗಳ ಬಗ್ಗೆ ವಿವರಣೆ ನೀಡುತ್ತಾರೆ.

**-ಗಣೇಶ್ ನಾಡಿಗೇರ್, ಶಿವಮೊಗ್ಗ**

# ಸಾಲು ಗಿಡಗಳಿಗೆ ಸಲೈನ್



ಸರ್ಕಾರ ಮಳೆಗಾಲದಲ್ಲಿ ರಸ್ತೆಬದಿಗೆ ಸಾಲು ಸಾಲು ಗಿಡಗಳನ್ನು ನೆಡುತ್ತದೆ. ಸಕಾಲಕ್ಕೆ ಮಳೆ ಆಗದಿದ್ದಾಗ ಗಿಡಗಳು ನೀರಿಲ್ಲದೆ ಬತ್ತಿ ಹೋಗುತ್ತವೆ. ಮನುಷ್ಯರಿಗೆ ಆಹಾರ ಸಿಗದಿದ್ದರೆ ವೈದ್ಯರು ಸಲೈನ್ ಹಚ್ಚಿ ಬದುಕಿಸಿಕೊಳ್ಳುತ್ತಿದ್ದರು. ಆದರೆ ಗಿಡಗಳಿಗಾರು ದಿಕ್ಕು? ಎಂದು ಯೋಚಿಸುತ್ತಿರುವಾಗಲೇ ರಬಕವಿಯ ಬ್ರಹ್ಮಾನಂದ ನಗರದ ರಸ್ತೆ ಪಕ್ಕದಲ್ಲಿ ನೆಟ್ಟ ಮರಗಳಿಗೆ ಸಲೈನ್ ಹಚ್ಚಿರುವ ದೃಶ್ಯ ಕಣ್ಣಿಗೆ ಬಿತ್ತು.

ಇಲ್ಲಿಯ ಮೂಳೆ ತಜ್ಞ ಡಾ. ವಿನೋದ ಮೇತ್ರಿ ಅವರು ದಾರಿ ಬದಿಯ ಗಿಡಗಳು ನೀರಿಲ್ಲದೆ ಸಾಯಬಾರದೆಂದು ಯೋಚಿಸಿ ಮನುಷ್ಯರಿಗೆ ಸಲೈನ್ ಹಚ್ಚುವಂತೆ ಈ ಗಿಡಗಳಿಗೂ ಕೂಡ ತಮ್ಮ ಸ್ವಂತ ಖರ್ಚಿನಿಂದ ಬಾಟಲ್ ಅಳವಡಿಸಿದ್ದಾರೆ. ದಾರಿಹೋಕರು ಯಾವಾಗಲಾದರೊಮ್ಮೆ ಒಂದು ತಂಬಿಗೆ ನೀರು ಹಾಕಿದರೆ ಸಾಕು ಅದು ಹನಿ ಹನಿಯಾಗಿ ಮರದ ಬೇರಿಗೇ ತಲುಪುತ್ತದೆ. ಹೀಗಾಗಿ ಗಿಡಗಳು ನಳನಳಿಸಲು ಸಾಧ್ಯ.

**- ಯಶವಂತ ವಾಜಂತ್ರಿ, ರಬಕವಿ**